ನಂ:ಎಡಿಎಂ:2:ಎಎನ್‌ಟಿ:ಸಿಆರ್:152:84-85

ಧಾರ್ಮಿಕ ದತ್ತಿ ಆಯುಕ್ತರ ಕಛೇರಿ,
ಬೆಂಗಳೂರು,
ದಿನಾಂಕ: 27-7-85

## ಸುತ್ತೋಲೆ

ವಿಷಯ:- ಕರ್ನಾಟಕ ಭೂಸುಧಾರಣಾ ಕಾಯಿದೆ 1961 ರಂತೆ ರಾಜ್ಯದ ಮುಜರಾಯಿ ಸಂಸ್ಥೆಗಳಿಗೆ ವರ್ಷಾಸನ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ:- ಈ ಕಛೇರಿಯ ಸುತ್ತೋಲೆಯ ನಂಬರ್ ಎಡಿಎಂ:2: ಎಎನ್‌ಟಿ:ಸಿಆರ್:289:83-84, ದಿನಾಂಕ: 5.12.1983.

---

ವರ್ಷಾಸನದ ಮಂಜೂರಾತಿಗಾಗಿ ಇತ್ತೀಚೆಗೆ ಈ ಕಛೇರಿಯ ಸ್ಥಳೀಯ ಅಧಿಕಾರಿಗಳಿಂದ ಬರುವ ಅನೇಕ ಪ್ರಸ್ತಾವಗಳು ಅಪೂರ್ಣವಾಗಿ ಅಗತ್ಯವಾಗಿರುವ ಮಾಹಿತಿಗಳನ್ನು ಒಳಗೊಂಡಿರುವುದಿಲ್ಲವಾದ್ದರಿಂದ ಈ ಕಛೇರಿಯಿಂದ ಹಕ್ಕುಪತ್ರಗಳನ್ನು ಮಂಜೂರು ಮಾಡುವಲ್ಲಿ ತುಂಬಾ ತೊಂದರೆಯಾಗುತ್ತಿದೆ. ಆದುದರಿಂದ ಈಗಾಗಲೇ ನೀಡಿದ ಉಲ್ಲೇಖದಲ್ಲಿ ದಿನಾಂಕ: 5.12.1983 ರ ಸುತ್ತೋಲೆಯ ಪ್ರಕಾರ ಮತ್ತು ಈ ಕೆಳಕಂಡ ಮಾಹಿತಿಗಳನ್ನು ಒಳಗೊಂಡ ವರ್ಷಾಸನದ ಪ್ರಸ್ತಾವಗಳನ್ನು ಸಲ್ಲಿಸಲು ನಿರ್ದೇಶಿಸಲಾಗಿದೆ.

(1) ಪ್ರಸ್ತಾವದಲ್ಲಿ ದೇವಾಲಯ ಇರುವ ಗ್ರಾಮ, ಮತ್ತು ಬೇರೆ ಭಾಗದ ಜಮೀನುಗಳು ಇರುವ ಗ್ರಾಮ ತಾಲ್ಲೂಕು ಮತ್ತು ಜಿಲ್ಲೆ ಇವುಗಳನ್ನು ಪ್ರತ್ಯೇಕವಾದ ಕಾಲಂನಲ್ಲಿ ಸೂಚಿಸಬೇಕು.

(2) ಜಮೀನುಗಳು ದಿನಾಂಕ:- 1.3.1974 ರಿಂದ ಕರ್ನಾಟಕ ಭೂಸುಧಾರಣೆ ಕಾಯಿದೆ 1961 ರ ಪ್ರಕಾರ ಸರ್ಕಾರದಲ್ಲಿ ನಿಹಿತಗೊಂಡಿದ್ದರೆ ಮಾತ್ರ ಪರಿಶೀಲಿಸಿ, ಭೂನ್ಯಾಯ ಮಂಡಳಿಯ ಆದೇಶದ ಪ್ರತಿಗಳೊಂದಿಗೆ(ಪ್ರತಿ ಸರ್ವೆ ನಂಬರ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಪ್ರತಿಗಳನ್ನು ಲಗತ್ತಿಸಿರಬೇಕು) ಕಳುಹಿಸಬೇಕು.

(3) ಪ್ರಸ್ತಾವದಲ್ಲಿ ಸೂಚಿಸಿರುವ ಜಮೀನಿನ ಸರ್ವೆ ನಂಬರುಗಳ, ಜಮೀನುಗಳ ವಿಸ್ತೀರ್ಣದ ಮತ್ತು ಆಕಾರದ ವಿವರಗಳು ಮತ್ತು, ಭೂನ್ಯಾಯ ಮಂಡಳಿಯ ಆದೇಶದ ಪ್ರತಿಗಳಲ್ಲಿರುವ (ತೀರ್ಮಾನವಾಗಿರುವ) ವಿವರಗಳು ಒಂದಕ್ಕೊಂದು ಹೋಲುತ್ತಿರಬೇಕು. ವ್ಯತ್ಯಾಸವಿದ್ದಲ್ಲಿ ಅದಕ್ಕೆ ಸಮರ್ಥಕವಾದ ಸ್ಪಷ್ಟೀಕರಣವನ್ನು ನೀಡಬೇಕು.

(4) ಭೂನ್ಯಾಯ ಮಂಡಳಿಯಲ್ಲಿ ಇತ್ಯರ್ಥವಾಗಲು ಬಾಕಿ ಉಳಿದಿರುವ ಜಮೀನುಗಳ ವಿವರ ಸದರಿ ಬಾಕಿ ಇರುವ ಪ್ರಕರಣದಲ್ಲಿ ಜಮೀನುಗಳು ದೇವಾಲಯದ ಪರವಾಗಿ ತೀರ್ಮಾನವಾಗುವ

ಸಂದರ್ಭವಿದ್ದಲ್ಲಿ ಅಂತಿಮ ತೀರ್ಮಾನದ ನಂತರವೂ ಪ್ರಕರಣವು ದೇವಾಲಯಕ್ಕೆ ಸಂಬಂಧಿಸಿದ ಗೇಣಿದಾರರುಗಳ ನಡುವೆಯೇ ಇತ್ಯರ್ಥವಾಗಬೇಕಾಗಿದ್ದಲ್ಲಿ ಅಂತಹ ಜಮೀನುಗಳ ಬಗ್ಗೆ ವರ್ಷಾಸನವನ್ನು ಸ್ಪಷ್ಟ ಅಭಿಪ್ರಾಯದೊಂದಿಗೆ ಶಿಫಾರಸ್ಸು ಮಾಡಬಹುದಾಗಿರುತ್ತದೆ.

(5) ಧಾರ್ಮಿಕ ದೇವಾಲಯಗಳಿಗೆ ಈಗಾಗಲೇ ಮಧ್ಯಂತರ ವರ್ಷಾಸನ ಮಂಜೂರಾಗಿದ್ದಲ್ಲಿ ಹಿಂದಿನ ಹಕ್ಕುಪತ್ರಗಳನ್ನು ಲಗತ್ತಿಸಿರಬೇಕು. ಹಿಂದಿನ ಹಾಗೂ ಶೇಕಡ 100 ರಂತೆ ಶಿಫಾರಸ್ಸು ಮಾಡಿರುವ ಮೊತ್ತಕ್ಕೆ ವ್ಯತ್ಯಾಸವಿದ್ದಲ್ಲಿ ಕಾರಣಗಳನ್ನು ಕೊಡಬೇಕು.

(6) ದೇವಾಲಯದ ಆಡಳಿತಾಧಿಕಾರಿಯವರ ಪ್ರಮಾಣಪತ್ರವನ್ನು ಲಗತ್ತಿಸಿದ್ದಲ್ಲಿ ಸದರಿ ಪತ್ರದಲ್ಲಿರುವ ವಿಸ್ತೀರ್ಣ, ಸರ್ವೆ ನಂ. ಹಾಗೂ ಆಕಾರದ ವಿವರಗಳು ಮತ್ತು ವರ್ಷಾಸನದ ಪ್ರಸ್ತಾವದಲ್ಲಿ ಸೂಚಿಸುವ ಜಮೀನುಗಳ ವಿಸ್ತೀರ್ಣ ಸರ್ವೆ ನಂ: ಆಕಾರದ ವಿವರಗಳು ಒಂದಕ್ಕೊಂದು ಹೊಂದುವಂತಿರಬೇಕು. ವ್ಯತ್ಯಾಸವಿರುವ ಸಂದರ್ಭದಲ್ಲಿ ಕಾರಣವನ್ನು ಸೂಚಿಸಬೇಕು.

(7) ಕರ್ನಾಟಕ ಭೂಸುಧಾರಣೆ ಕಾಯಿದೆ 1961 ರ ಪ್ರಕಾರ ಸರ್ಕಾರಕ್ಕೆ ನಿಹಿತಗೊಂಡ ಜಮೀನುಗಳ ಬಗ್ಗೆ ಮಾತ್ರ ವರ್ಷಾಸನಕ್ಕೆ ಶಿಫಾರಸ್ಸು ಮಾಡಬೇಕು. ಜಮೀನುಗಳು ಕರ್ನಾಟಕ ಹಲವು ಇನಾಂ ರದ್ದಿಯಾತಿ ಕಾಯಿದೆ 1977 ರಂತೆ ಅಥವಾ ಕರ್ನಾಟಕ ಇನಾಂ ರದ್ದಿಯಾತಿ ಕಾಯಿದೆ 1955 ರಂತೆ ಸರ್ಕಾರದಲ್ಲಿ ನಿಹಿತಗೊಂಡಿದ್ದಲ್ಲಿ ವರ್ಷಾಸನ ಮಂಜೂರಾತಿಗಾಗಿ ಈ ಕಛೇರಿಗೆ ಶಿಫಾರಸ್ಸು ಮಾಡುವ ಪ್ರಶ್ನೆ ಬರುವುದಿಲ್ಲ.

ಕ.ಪ್ರ. ಆ. ಅ.)

ಧಾರ್ಮಿಕ ದತ್ತಿ ಆಯುಕ್ತರ ಪರವಾಗಿ.

(1) ಜಿಲ್ಲಾಧಿಕಾರಿಯವರು : ವಿಶೇಷ ಜಿಲ್ಲಾಧಿಕಾರಿಯವರು.

(2) ತಹಸೀಲ್ದಾರ್ ರು — ತಾಲ್ಲೂಕು.

ದಾ.

**BOOK-POST**

**On India Govt. Service**

"THE TAHSILDAR,
Channarayapatna TALUK
Hassan dist

Despatcher,
Office of the Commissioner for Religious and Charitable Endowments,
Bangalore-560009